**<u>ದಿನಾಂಕಃ 23.02.2026 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣ ವಚನ ಬೋಧಿಸಲಾಯಿತುಃ</u>**

**<u>ಪಾಟೀ ಸವಾಲು: 2 ನೇ ಎದುರುದಾರರ / Insurance company ಪರ ವಕೀಲರಾದ ಶ್ರೀ.HKR ರವರಿಂದಃ</u>**

1) ಕಳೆದ 7 ವರ್ಷಗಳಿಂದ ನನಗೆ ಮೂತ್ರ ಪಿಂಡದ ತೊಂದರೆಗೆಳು ಇವೆ. ನಾನು ಬೆಂಗಳೂರಿನ ಎಂ.ಎಸ್. ರಾಮಯ್ಯ ಆಸ್ಪತ್ರೆಯಲ್ಲಿ ನನ್ನ ಮೂತ್ರ ಪಿಂಡದ ತೊಂದರೆಗೆ ಚಿಕಿತ್ಸೆಯನ್ನು ಪಡೆದುಕೊಳ್ಳುತ್ತಿದ್ದೇನೆ. ದಿಃ 30.01.2025 ರಂದು ನಾನೊಬ್ಬನೇ ಎಂ.ಎಸ್. ರಾಮಯ್ಯ ಆಸ್ಪತ್ರೆಯ ಕಡೆಗೆ ಹೋಗುತ್ತಿದ್ದೆನು. ನನ್ನ ಬಳಿ ಚಾಲನಾ ಪರವಾನಗಿಯು ಇರುವುದಿಲ್ಲ. ಅಪಘಾತವು ಆದಂತಹ ಸಮಯದಲ್ಲಿ ನಾನು ಬಾಡಿಗೆ ಆಟೋ ರಿಕ್ಷಾ ದಲ್ಲಿ ಹೋಗುತ್ತಿದ್ದೆನು. ಕೆಎ-41-ಸಿ-4758 ಸಂಖ್ಯೆಯ ಆಟೋ ರಿಕ್ಷಾ ದ ದಾಖಲೆಗಳನ್ನು ನಾನು ನೋಡಿರುವುದಿಲ್ಲ.

2) ಯಾವ ಅಪಘಾತದಲ್ಲಿ ನನಗೆ ತೊಂದರೆಗಳು ಆಗಿವೆಯೋ ಸದರಿ ಅಪಘಾತವನ್ನು ನನ್ನ ಧರ್ಮ ಪತ್ನಿಯು ನೋಡಿರುವುದಿಲ್ಲ. ನನ್ನ ಹೆಂಡತಿಯು ಸದರಿ ಅಪಘಾತವನ್ನು ನೋಡಿಲ್ಲದೇ ಇರುವ ಕಾರಣದಿಂದ ಅಪಘಾತವು ಯಾರ ತಪ್ಪಿನಿಂದ ಆಯಿತು ಎಂದು ನನ್ನ ಹೆಂಡತಿಗೆ ಗೊತ್ತಿರುವುದಿಲ್ಲ.

3) ಅಪಘಾತದ ಸಂಬಂಧವಾಗಿ ನನ್ನ ಹೆಂಡತಿಯು ಪೋಲಿಸರಿಗೆ ಫಿರ್ಯಾದನ್ನು ನೀಡಿದ್ದಾರೆ.

4) ಅಪಘಾತವು ಆದ ನಂತರ ಮೊದಲಿಗೆ ನಾನು ಕೆ.ಸಿ.ಜನರಲ್ ಆಸ್ಪತ್ರೆಗೆ ಹೋದೆನು ನಂತರ ಅಲ್ಲಿಂದ ಎಂ.ಎಸ್.ರಾಮಯ್ಯ ಆಸ್ಪತ್ರೆಗೆ ನನ್ನನ್ನು ಕಳುಹಿಸಿ ಕೊಟ್ಟರು.

5) ಅಪಘಾತವು ಯಾವ ರೀತಿ ಮತ್ತು ಹೇಗೆ ಆಯಿತು ಎಂಬ ವಿಷಯಗಳನ್ನು ಎಂ.ಎಸ್.ರಾಮಯ್ಯ ಆಸ್ಪತ್ರೆಯ ವೈದ್ಯರ ಬಳಿ ನಾನು ಹೇಳಿದ್ದೇನೆ. ಸದರಿ ಎಂ.ಎಲ್.ಸಿ ದಾಖಲೆಯನ್ನು ಹಾಜರುಪಡಿಸಲು ನನಗೆ ತೊಂದರೆಯು ಇಲ್ಲ.

6) ಅಪಘಾತವು ಆಗುವುದಕ್ಕಿಂತ ಮೊದಲು ನಾನು ಸಾಮಾನ್ಯವಾಗಿ ಎಲ್ಲಿಗೆ ಹೋಗಬೇಕಾದರೂ ಆಟೋ ರಿಕ್ಷಾದಲ್ಲಿಯೇ ಓಡಾಡುತ್ತಾ ಇದ್ದೆನು ಮತ್ತು ನಡೆದುಕೊಂಡು ಸಹಾ ಹೋಗುತ್ತಿದ್ದೆನು. ನಾನು ಮೊದಲಿನಿಂದಲೂ ನನ್ನ ಮೂತ್ರ ಪಿಂಡದ ಸಮಸ್ಯೆಯ ಕಾರಣಕ್ಕಾಗಿ ರಾಮಯ್ಯ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದುಕೊಳ್ಳುತ್ತಿರುವ ಬಗ್ಗೆ ಇರುವ ಮೆಡಿಕಲ್ ದಾಖಲೆಗಳನ್ನು ಸಹಾ ನಾನು ಈ ಪ್ರಕರಣದಲ್ಲಿ ಹಾಜರುಪಡಿಸಿದ್ದೇನೆ ಎಂದರೆ ಸುಳ್ಳು.

7) ನಾನು ಹಾಜರುಪಡಿಸಿರುವಂತಹ ಎಲ್ಲಾ ಮೆಡಿಕಲ್ ಬಿಲ್ಲುಗಳು ನನ್ನ ಮೂತ್ರ ಪಿಂಡದ ಸಮಸ್ಯೆಗಳಿಗೆ ಸಂಬಂಧಪಟ್ಟಂತಹ ಮೆಡಿಕಲ್ ಬಿಲ್ ಅಥವಾ ದಾಖಲೆಗಳು ಆಗಿವೆ ಮತ್ತು ಆ ಮೆಡಿಕಲ್ ಬಿಲ್ಲುಗಳಿಗೂ ಮತ್ತು ಅಪಘಾತದಲ್ಲಿ ನನಗೆ ಆದಂತಹ ತೊಂದರೆ ಅಥವಾ ಗಾಯಗಳಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸುಳ್ಳು. ESI ಸಂಸ್ಥೆಯಿಂದ ಅಥವಾ ಪಾಲಿಸಿಯ ಅಡಿಯಲ್ಲಿ ನನಗೆ ಯಾವುದೇ ಹಣವನ್ನು ಕೊಟ್ಟಿರುವುದಿಲ್ಲ, ಆದರೆ ಚಿಕಿತ್ಸೆಯನ್ನು ಕೊಟ್ಟಿದ್ದಾರೆ.

8) ನಾನು ಔಷಧಿಗಳನ್ನು ಖರೀದಿ ಮಾಡಿರುವ ಬಗ್ಗೆ ಇರುವ ಬಿಲ್ಲುಗಳನ್ನು ಹಾಜರುಪಡಿಸಿರುವುದಿಲ್ಲ. ನಾನು ಹಾಜರುಪಡಿಸಿರುವಂತಹ ಮೆಡಿಕಲ್ ಬಿಲ್ಲುಗಳಿಗೆ ಪೂರಕವಾದಂತಹ ವೈದ್ಯರ ಸಲಹಾ ಸೂಚಿ ಚೀಟಿಗಳನ್ನು (medical Prescriptions) ಗಳನ್ನು ನಾನು ಹಾಜರುಪಡಿಸಿರುವುದಿಲ್ಲ. ರಾಮಯ್ಯ ಆಸ್ಪತ್ರೆಯಲ್ಲಿ ವೈದ್ಯರು ಸೂಚಿಸಿದ ಔಷಧಿಗಳನ್ನು ಅದೇ ಸಂಸ್ಥೆಯಲ್ಲಿ ಕೆಲಸ ಮಾಡುವಂತಹ ನರ್ಸ್ ಗಳು ಅದೇ ಸಂಸ್ಥೆಯ ಫಾರ್ಮಸಿಯಿಂದಲೇ ತಂದು ಕೊಡುತ್ತಾರೆ ಎಂದರೆ ಸರಿ. ನನಗೆ ಕೊಟ್ಟಿರುವ ಔಷಧಿಗಳ ಮೊತ್ತವನ್ನು ಎಂ.ಎಸ್.ರಾಮಯ್ಯ ಆಸ್ಪತ್ರೆಯ ಫೈನಲ್ ಬಿಲ್ ನಲ್ಲಿ ಸೇರಿಸಲಾಗಿದೆ ಎಂದರೆ ಸರಿ. ನಾನು ಒಟ್ಟು ಎರಡು ಬಾರಿ ಒಳರೋಗಿಯಾಗಿ ಚಿಕಿತ್ಸೆ ಪಡೆದಿದ್ದೇನೆ. ನಾನು ಎರಡು ಬಾರಿ ಒಳರೋಗಿಯಾಗಿ ಚಿಕಿತ್ಸೆ ಪಡೆದಾಗ ಒಂದೇ ರೀತಿಯ procedure

ಗಳನ್ನು ಆಸ್ಪತ್ರೆಯಲ್ಲಿ ಮಾಡಿದ್ದಾರೆ. ನಾನು ಎಂ.ಎಸ್.ರಾಮಯ್ಯ ಆಸ್ಪತ್ರೆಯಲ್ಲಿ ಇದ್ದಾಗ ನನ್ನ ಚಿಕಿತ್ಸೆಗಾಗಿ ತೆಗೆದುಕೊಂಡಿರುವಂತಹ ಔಷಧಿಗಳಿಗೆ ಸಂಬಂಧಿಸಿದ ಮೆಡಿಕಲ್ ಬಿಲ್ಲುಗಳನ್ನು ಸದರಿ ಆಸ್ಪತ್ರೆಯ ನರ್ಸ್ ಗಳು ಅದೇ ಆಸ್ಪತ್ರೆಯವರಿಗೆ ಕೊಟ್ಟಿದ್ದಾರೆ ಎಂದರೆ ಸರಿ.

9) ನಾನು ನನ್ನ ಚಿಕಿತ್ಸೆಗಾಗಿ ಖರ್ಚು ಮಾಡಿರುವಂತಹ ಹಣವನ್ನು ಈಗಾಗಲೇ ಎಂ.ಎಸ್.ರಾಮಯ್ಯ ಆಸ್ಪತ್ರೆಯವರು inpatient ಬಿಲ್ ನಲ್ಲಿ ಸೇರಿಸಿದ್ದಾರೆ ಮತ್ತು ಕೇವಲ ಹೆಚ್ಚಿನ ಪರಿಹಾರವನ್ನು ಪಡೆಯಬೇಕು ಎಂಬ ಉದ್ದೇಶದಿಂದ ನಾನು ನಿ.ಪಿ.20 ಎಂದು ಗುರುತು ಆಗಿರುವ ಮೆಡಿಕಲ್ ಬಿಲ್ಲುಗಳನ್ನು ಸೃಷ್ಟಿ ಮಾಡಿ ಹಾಜರುಪಡಿಸಿದ್ದೇನೆ ಎಂದರೆ ಸುಳ್ಳು. ನಾನು ನನ್ನ ಚಿಕಿತ್ಸೆಗಾಗಿ 5 ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿದ್ದೇನೆ ಎಂಬುದಾಗಿ ನಾನು ಸುಳ್ಳು ಪ್ರತಿಪಾದನೆಯನ್ನು ಮಾಡುತ್ತಿದ್ದೇನೆ ಎಂದರೆ ಸುಳ್ಳು.

10) ನಾನು ನನ್ನ ಸಾಕ್ಷಿ ಪ್ರಮಾಣ ಪತ್ರದ ಖಂಡಿಕೆ 5 ರಲ್ಲಿ ಹೇಳಿರುವ ವಿಷಯಕ್ಕೆ ಸಂಬಂಧಪಟ್ಟ ಹಾಗೆ ನಾನು ಯಾವುದೇ ದಾಖಲೆಯನ್ನು ಹಾಜರುಪಡಿಸಿರುವುದಿಲ್ಲ.

11) ಅಪಘಾತಕ್ಕಿಂತ ಮೊದಲು ನಾನು ಬೆಂಗಳೂರಿನ

ಕಾವೇರಿ ಚಲನಚಿತ್ರ ಮಂದಿರದಲ್ಲಿ ಕೆಲಸ ಮಾಡುತ್ತಿದ್ದೆನು ಮತ್ತು ನನಗೆ ಒಂದು ತಿಂಗಳಿಗೆ 25 ಸಾವಿರ ರೂಪಾಯಿ ಸಂಬಳ ಬರುತ್ತಿತ್ತು ಎನ್ನುವ ಬಗ್ಗೆ ನಾನು ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ.

12) ನನ್ನ ಹೆಂಡತಿಯು ಬಿ.ಬಿ.ಎಂ.ಪಿ ಯಲ್ಲಿ ಕೆಲಸ ಮಾಡುತ್ತಾರೆ ಎಂದರೆ ಸರಿ. ಅಪಘಾತದ ಸಂಬಂಧವಾಗಿ ನಾನು ಪೋಲಿಸರಿಗೆ ಹೇಳಿಕೆಯನ್ನು ನೀಡಿದ್ದೇನೆ ಮತ್ತು ಆ ರೀತಿ ನೀಡಿರುವ ಹೇಳಿಕೆಯಲ್ಲಿ "ನನಗೆ ಕಿಡ್ನಿ ಸಮಸ್ಯೆ ಆಗಿರುವುದರಿಂದ ಕೆಲಸಕ್ಕೆ ಹೋಗದೇ ಮನೆಯಲ್ಲಿಯೇ ವಿಶ್ರಾಂತಿ ಪಡೆಯುತ್ತಿರುತ್ತೇನೆ ಮತ್ತು ನನ್ನ ಹೆಂಡತಿಯ ಆದಾಯದ ಮೇಲೆ ಜೀವನ ಮಾಡಿಕೊಂಡಿದ್ದೇವೆ" ಎಂಬುದಾಗಿ ಹೇಳಿಕೆ ನೀಡಿದ್ದೇನೆ ಎಂದರೆ ಸುಳ್ಳು.

13) ಅಪಘಾತವು ಆಗುವ ಸಮಯದಲ್ಲಿ ನಾನು ಯಾವುದೇ ಕೆಲಸ ಮಾಡುತ್ತಿರಲಿಲ್ಲ ಮತ್ತು ನನಗೆ ಓಡಾಡಲು ಸಹಾ ಆಗುತ್ತಿರಲಿಲ್ಲ ಮತ್ತು ನನ್ನ ಅನುಕೂಲಕ್ಕಾಗಿ ನಾನು ಚಲನಚಿತ್ರ ಮಂದಿರದಲ್ಲಿ ಕೆಲಸ ಮಾಡುತ್ತಿದ್ದೆನು ಮತ್ತು ನನಗೆ ಸಂಬಳ ಬರುತ್ತಿತ್ತು ಎಂಬುದಾಗಿ ಸುಳ್ಳು ಪ್ರತಿಪಾದನೆಯನ್ನು ಮಾಡುತ್ತಿದ್ದೇನೆ ಎಂದರೆ ಸುಳ್ಳು.

14) ಯಾವ ಆಟೋ ರಿಕ್ಷಾ ದಲ್ಲಿ ನಾನು ಹೋಗುತ್ತಿದ್ದೆನೋ

ಆ ಆಟೋ ರಿಕ್ಷಾದ ಚಾಲಕನ ತಪ್ಪಿನಿಂದಲೂ ಸಹಾ ಅಪಘಾತವು ಆಗಿರಬಹುದು ಎಂದರೆ ಸುಳ್ಳು. ಯಾವ ಆಟೋ ರಿಕ್ಷಾದಲ್ಲಿ ನಾನು ಹೋಗುತ್ತಿದ್ದೆನೋ ಆ ಆಟೋ ರಿಕ್ಷಾಗೆ ಸಮರ್ಪಕವಾದ ದಾಖಲೆಗಳು ಇರಲಿಲ್ಲ ಮತ್ತು ಆ ಕಾರಣದಿಂದಲೇ ಅಪಘಾತವು ಆದ ಎರಡು ದಿನಗಳ ನಂತರ ನಾನು ನನ್ನ ಹೆಂಡತಿಯ ಮೂಲಕ ಕಾರಿನ ಚಾಲಕನ ವಿರುದ್ಧ ಸುಳ್ಳು ಪ್ರಕರಣವನ್ನು ಮಾಡಿಸಿದ್ದೇನೆ ಎಂದರೆ ಸುಳ್ಳು.

15) ಆಟೋ ರಿಕ್ಷಾ ಚಾಲಕನ ತಪ್ಪಿನಿಂದಲೇ ಅಪಘಾತವು ಆಗಿದೆ ಮತ್ತು ಆ ಕಾರಣದಿಂದ ಎರಡನೇ ಎದುರುದಾರರು ನನಗೆ ಯಾವುದೇ ಪರಿಹಾರವನ್ನು ಕೊಡಲು ಜವಾಬ್ದಾರರು ಆಗಿರುವುದಿಲ್ಲ ಎಂದರೆ ಸುಳ್ಳು.

16) ಕೇವಲ ಪರಿಹಾರವನ್ನು ಪಡೆಯಬೇಕು ಎಂಬ ಉದ್ದೇಶದಿಂದ ನಾನು ನನಗೆ ಪರಿಚಯ ಇರುವಂತಹ ವೈದ್ಯರ ಮೂಲಕ ಸುಳ್ಳು ದಾಖಲೆಗಳನ್ನು ಸೃಷ್ಟಿ ಮಾಡಿದ್ದೇನೆ ಮತ್ತು ಈ ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಿದ್ದೇನೆ ಎಂದರೆ ಸುಳ್ಳು.

**ಪಾಟೀ ಸವಾಲು: 1 ನೇ ಎದುರುದಾರರ ಪರ ವಕೀಲರಿಂದಃ**

ಸದರಿ ಎದುರುದಾರರು ಮತ್ತು ಅವರ ಪರ ವಕೀಲರು ಹಾಜರಿಲ್ಲ. ಆದ ಕಾರಣದಿಂದ ಯಾವುದೇ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

**ಮರು ವಿಚಾರಣೆಃ ಇಲ್ಲ.**

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಲ್ಪಟ್ಟಿದೆ)

**(ಓ.ಹೇ.ಕೇ.ಸ.ಇ)**

**ಮುಖ್ಯ ನ್ಯಾಯಾಧೀಶರು,**
ಲಘು ವ್ಯವಹಾರಗಳ ನ್ಯಾಯಾಲಯ,
ಬೆಂಗಳೂರು.